


## ಜ್ಞಾನಪ್ರದ ಲೇಖನ

'ಕರುಣೆಯ ಮರಣ' (ಫೆ. 27, ಮಂಜುಶ್ರೀ ಎಂ. ಕಡಕೋಳ) ಮಾಹಿತಿಪೂರ್ವಕ ಮತ್ತು ಜ್ಞಾನಪ್ರದವಾಗಿದೆ. ಅತ್ಯಾಚಾರ ಮತ್ತು ಹಲ್ಲೆಗೆ ಒಳಗಾಗಿ ಸುಮಾರು 35 ವರ್ಷ ಮುಂಬೈನ ಆಸ್ಪತ್ರೆಯಲ್ಲಿ ಜೀವಚ್ಛವವಾಗಿದ್ದ ಗೀತಾ ಶಾನಭೋಗ್ ಮತ್ತು 8 ವರ್ಷ ಯಾವುದೇ ಚಿಕಿತ್ಸೆಯ ಫಲವಿಲ್ಲದೆ ಕೋಮಾದಲ್ಲಿದ್ದ ಅತ್ಯುತ್ತಮ ರಾಜನೀತಿಜ್ಞ ಜಾರ್ಜ್ ಫರ್ನಾಂಡಿಸ್ ಅಂತಹವರ ಸ್ಥಿತಿ ನೆನೆಸಿಕೊಂಡಾಗ ದಯಾಮರಣ ಉಪಯೋಗಕರ ಎಂದೆನಿಸುತ್ತದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ನೈಜ, ನಂಬಲರ್ಹವಾದ ಸುಮಾರು 15–20 ಗಣ್ಯರ ಸಮಿತಿ ರಚಿಸಿ, ಒಮ್ಮತದಿಂದ ದೃಢೀಕರಿಸಿದರೆ, ದಯಾಮರಣದ ದುರುಪಯೋಗ ಇರುವುದಿಲ್ಲ.

—ಎಸ್. ರಾಘವನ್, ಬೆಂಗಳೂರು

## ಒಳನೋಟ ನೀಡಿದ ಬರಹ

ಬಸವಣ್ಣನವರ ವಚನದೊಂದಿಗೆ ಆರಂಭವಾಗುವ ಲೇಖನ ಮಹತ್ವದ ಸಂಗತಿಗಳನ್ನು ಒಳಗೊಂಡಿದೆ. ದಯಾಮರಣದ ಸಾಧಕಬಾಧಕಗಳನ್ನು ನಿರೂಪಿಸುತ್ತ ಜಾಗತಿಕ ವಿದ್ಯಮಾನಗಳು ಹಾಗೂ ವಿವಿಧ ಕ್ಷೇತ್ರಗಳ ತಜ್ಞರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಸಮಚಿತ್ತದಿಂದ ವಿಶ್ಲೇಷಣೆ ಮಾಡಲಾಗಿದೆ. ಜೀವಚ್ಛವವಾಗಿ ಇರುವುದಕ್ಕಿಂತ ಮರಣವನ್ನು ಮಹಾನವಮಿಯನ್ನಾಗಿಸಿಕೊಳ್ಳುವುದು ಉಚಿತ.

—ಪ್ರೊ. ಮಲ್ಲಿಕಾರ್ಜುನ ಕಲಮರಹಳ್ಳಿ

## ಮರಣದ ಪರಿ

'ಕರುಣೆಯ ಮರಣ' ಅರ್ಥಾತ್ ಮರಣದ –ಕರುಣದ ಹೋರಾಟದ ಹಾದಿಯ ಅವಲೋಕನ ಮನನ ಯೋಗ್ಯ. (ಭೀಷ್ಮನಿಗಿದ್ದ 'ಇಚ್ಛಾಮರಣ'ದ ಸಾಧ್ಯತೆ– ಈಗಲೂ ಎಲ್ಲರಿಗೂ ಇದ್ದಿದ್ದರೆ ಎಷ್ಟು ಚೆನ್ನಿತ್ತು!)

—ಸಿಪಿಕೆ, ಮೈಸೂರು

## ಮುಕ್ತಿ ಮಾರ್ಗ

ಗುಣಪಡಿಸಲಾಗದ ರೋಗದ ನೋವು, ಯಾತನೆಯಿಂದ ಮುಕ್ತಗೊಳಿಸಲು, ಘನತೆಯ ಸಾವು ಒದಗಿಸಿಕೊಡುವ ಆದೇಶವನ್ನು ಸರ್ಕಾರ ಹೊರಡಿಸಿರುವುದು ಅತ್ಯಂತ ಸ್ವಾಗತಾರ್ಹ. ಇಚ್ಛಾಮರಣ ನೀಡುವ ನಿಟ್ಟಿನಲ್ಲಿ ಕಾನೂನು ಹೆಜ್ಜೆ ಇಡುವುದು ಸರ್ಕಾರದ ಕರ್ತವ್ಯ.

—ಎಚ್.ಎಸ್. ಚಂದ್ರಶೇಖರ

## ಮರಣವೇ ಮಹಾನವಮಿ

ವಿಷಯದ ಗಂಭೀರತೆಯನ್ನೂ, ಸೂಕ್ಷ್ಮತೆಯನ್ನೂ ಪರಿಶೀಲಿಸಿ, ತಜ್ಞರ ಅಭಿಪ್ರಾಯಗಳ ಸಮೇತ ಚೆನ್ನಾಗಿ ನಿರೂಪಿಸಲ್ಪಟ್ಟಿದೆ. ಈ ಕಾನೂನು ಬದ್ಧತೆಯ ಅಪೂರ್ವ ಅವಕಾಶವು, ದುರುಪಯೋಗವಾಗದೇ, ಅರ್ಹ ವ್ಯಕ್ತಿಗಳಿಗೆ ಲಭಿಸುವಂತಾದರೆ ಮರಣವೇ ಮಹಾನವಮಿ.

—ರಾಮಚಂದ್ರ, ಬೆಂಗಳೂರು

## ಅಪೂರ್ವ ದಾಖಲೆ



'ನಾಲ್ವಡಿ ಮತ್ತು ಕನ್ನಂಬಾಡಿ' (ಫೆ. 27, ಟಿ.ಆರ್. ಅನಂತರಾಮು) ಲೇಖನದಲ್ಲಿ ಕೃಷ್ಣರಾಜಸಾಗರ ಕುರಿತಂತೆ ವಸ್ತುನಿಷ್ಠ ಸಂಗತಿಗಳನ್ನು ಅಪೂರ್ವವಾಗಿ ದಾಖಲಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ ಜನಪ್ರಿಯ ಕಾರ್ಯಕ್ರಮಗಳ ವಿವರಗಳನ್ನೂ, ಆಗಿನ ಮೈಸೂರು ರಾಜ್ಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತ್ಯಂತರ, ಅಭಿವೃದ್ಧಿ ಕಾರ್ಯಗಳ ಅಂಕಿ ಅಂಶಗಳನ್ನು ಬೋಧಪ್ರದವಾಗಿ, ಪರಿಣಾಮಕಾರಿ ಆಗಿ ತಿಳಿಸಿದ್ದಾರೆ.


—ಎ.ಡಿ. ನಂಜುಂಡಸ್ವಾಮಿ, ಮೈಸೂರು

## ಕಾದಂಬರಿಗಳ ಆಹ್ವಾನ

'ಸಂಗಂ ಸಾಹಿತ್ಯ ಪುರಸ್ಕಾರ'ಕ್ಕಾಗಿ 'ಸಂಗಂ ಸಂಸ್ಥೆ ಬಳ್ಳಾರಿ' ಕಾದಂಬರಿಗಳನ್ನು ಆಹ್ವಾನಿಸಿದೆ. 2022–24ರ ಅವಧಿಯಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಕಾದಂಬರಿಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಪ್ರಶಸ್ತಿಯು 25 ಸಾವಿರ ರೂಪಾಯಿಗಳ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಕಾದಂಬರಿ ತಲುಪಲು ಕೊನೆ ದಿನ ಮಾರ್ಚ್ 20.

ವಿಳಾಸ: ಅಜಯ ಬಣಕಾರ್, 'ಹೂನಗೆ', ಪ್ಲಾಟ್ ನಂ. 2, 2ನೇ ಕ್ರಾಸ್, ಬಾಲಾಜಿ ಕಾಲೊನಿ, ತಾಳೂರು ರಸ್ತೆ, ಬಳ್ಳಾರಿ–583103. ವಿವರಗಳಿಗೆ: 94483 71009, 9449622737.

## ರೋಗಗ್ರಸ್ತ ಸಂಗತಿ



'ವಾಸನ್ನಾಮಿ' (ಫೆ. 27, ರಾಜಕುಮಾರ ಕುಲಕರ್ಣಿ) ಕಥೆ ಜಾತಿ ಕುರಿತ ರೋಗಗ್ರಸ್ತ ಸಂಗತಿಯನ್ನು ಮುಂದಿಡುತ್ತದೆ. ಕನ್ನಡ ಸಾಹಿತ್ಯ ಪರಂಪರೆ ಎಲ್ಲರನ್ನೂ ಒಟ್ಟಿಗೆ ಕೂಡಿ ಬಾಳಲು ಹರಸುವ ದಿಸೆಯಲ್ಲಿ ಹೆಜ್ಜೆ ಹಾಕುತ್ತಲೇ ಬಂದಿದೆ. ಆದರೆ ಕೆಲವು ಮನಸ್ಥಿತಿ ಜನರನ್ನು ಮತ್ತೆ ಮೂಢನಂಬಿಕೆ ಒಳಗೆ ಬಂಧಿಸುವ ಕೆಲಸ ಮಾಡುತ್ತಲಿದೆ. ಎಲ್ಲವನ್ನೂ ಮೀರಿ ನಿಲ್ಲುವ ಶ್ರೀಲಕ್ಷ್ಮೀ, ಶ್ರೀಹರಿಯಂಥ ಯುವಜನ ಹೆಚ್ಚಲಿ.

—ಧ್ರುವ ಪಾಟೀಲ್, ಹಂಪಿ

## ಮನಸೂರೆಗೊಂಡಿತು

ವಿಭಿನ್ನ ಕಥಾವಸ್ತು, ಉತ್ತಮ ಬರಹ ಶೈಲಿಯಿಂದ ಮನಸೂರೆಗೊಂಡ ಕಥೆ.

—ಜ್ಯೋತಿ ಉಮೇಶ್, ಮೈಸೂರು

## ಅಭಿಮಾನ ಉಕ್ಕಿತು

'ಭೂತಾಯಿಯ ಸುಪುತ್ರಿ' (ಫೆ. 27, ಪ್ರವೀಣ ಕುಲಕರ್ಣಿ) ಉತ್ತಮ ಲೇಖನ. ಕಾಡಿನಲ್ಲಿ ಯುವತಿಯರು ಕಟ್ಟಿಗೆ ಆಯುವಾಗ ಅನುಭವಿಸುತ್ತಿದ್ದ ವ್ಯಥೆಗಳನ್ನು ಕೇಳಿ, ಅವರಿಗೆ ಸಂಸ್ಥೆ ಕಟ್ಟಿ, ಸ್ವಾವಲಂಬಿಗಳಾಗಲು ಬೆಂಗಾವಲಾಗಿ ನಿಂತ ಜನಕ್ ಅವರಿಗೊಂದು ನಮಸ್ಕಾರ. 75ರ ಹರೆಯದಲ್ಲೂ ನಿಸರ್ಗಕ್ಕಾಗಿ ದುಡಿಯುತ್ತಿರುವ ಅವರು ಹೈಕೋರ್ಟ್‌ನಲ್ಲಿ ಅನುವಾದಕಿಯಾಗಿದ್ದ ವಿಷಯ ತಿಳಿದು ನ್ಯಾಯಾಂಗ ಇಲಾಖೆಯ ನೌಕರಳಾಗಿದ್ದ ನನ್ನಲ್ಲಿ ಅಭಿಮಾನ ಉಕ್ಕಿತು.

—ಅನ್ನಪೂರ್ಣಮ್ಮ, ಬೆಂಗಳೂರು

## ಸ್ಪಷ್ಟ ಸಾಕ್ಷಿ

'ಗಾಂಧೀಗುಡಿ ಎಂಬ ಚರಿತ್ರೆ' (ಫೆ. 27, ನಭಾ ಒಕ್ಕುಂದ) ಲೇಖನ, ಗಾಂಧಿಯವರ ಪರಿಶುದ್ಧ ವ್ಯಕ್ತಿತ್ವದ ಬಗ್ಗೆ ನಮ್ಮ ಜನಸಾಮಾನ್ಯರಿಗಿದ್ದ ಗೌರವ, ಅಭಿಮಾನಕ್ಕೆ ಸ್ಪಷ್ಟ ಸಾಕ್ಷಿ. ಇದು ನಿಜಕ್ಕೂ ವಿರಳಾತಿ ವಿರಳ ಉದಾಹರಣೆ.

—ಹುರುಕಡ್ಲಿ ಶಿವಕುಮಾರ
ಬಾಚಿಗೊಂಡನಹಳ್ಳಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in